28

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 2/3/2021

# ಅತೃಪ್ತರ ಸಭೆ, ಸಿಎಂ ಬುಲಾವ್

## ಅನಗತ್ಯ ಹೇಳಿಕೆ ನೀಡದಂತೆ ಯಡಿಯೂರಪ್ಪ ತಾಕೀತು

**ಬೆಂಗಳೂರು:** ಸಚಿವ ಸ್ಥಾನ ದೊರಕದಿರುವುದರಿಂದ ಬೇಸರಗೊಂಡಿರುವ ಶಾಸಕರನ್ನು ನಿವಾಸಕ್ಕೆ ಕರೆಸಿಕೊಂಡ ಸಿಎಂ ಯಡಿಯೂರಪ್ಪ ಸಮಾಲೋಚನೆ ನಡೆಸಿದ್ದಾರೆ. ಅನಗತ್ಯ ಹೇಳಿಕೆ ನೀಡದಂತೆ ಸೂಚನೆ ಕೊಟ್ಟಿದ್ದಾರೆ.

ಸೋಮವಾರ ಮಧ್ಯಾಹ್ನ ಭೋಜನ ವಿರಾಮದ ವೇಳೆ ಬಿಜೆಪಿಯ 14ಕ್ಕೂ ಹೆಚ್ಚು ಶಾಸಕರು ವಿಧಾನಸೌಧದಲ್ಲಿ ಸಭೆ ನಡೆಸಿದರು. ಊಟದ ಜತೆಗೆ ಅನೌಪಚಾರಿಕ ಚರ್ಚೆ ನಡೆಸಿದ ಈ ಶಾಸಕರು, ಸರಕಾರದ ಕಾರ್ಯವೈಖರಿಯ ಬಗ್ಗೆಯೂ ಪ್ರಸ್ತಾಪಿಸಿದರು. ಅಗತ್ಯ ಕಂಡರೆ ಅಧಿವೇಶನದ ಬಳಿಕ ದಿಲ್ಲಿಗೆ ತೆರಳಿ ವರಿಷ್ಠರನ್ನು ಭೇಟಿಯಾಗಬೇಕು ಎಂಬ ಸಲಹೆಯೂ ಶಾಸಕರ ಸಭೆಯಲ್ಲಿ ಬಂದಿದೆ ಎನ್ನಲಾಗಿದೆ.

**ಸಭೆ ಬಂದ್ ಮಾಡಲು ಸೂಚನೆ:** ಕಲಾಪವನ್ನು ಮಂಗಳವಾರಕ್ಕೆ ಮುಂದೂಡುತ್ತಿದ್ದಂತೆ ಈ ಶಾಸಕರನ್ನು ನಿವಾಸಕ್ಕೆ ಸಿಎಂ ಕರೆಸಿಕೊಂಡರು. ಅದರಂತೆ, ಶಾಸಕರಾದ ಎಂ.ಪಿ.ರೇಣುಕಾಚಾರ್ಯ, ನಾ.ಶಿವರಾಜ ಪಾಟೀಲ್, ಮಾಡಾಳು ವಿರೂಪಾಕ್ಷಪ್ಪ, ಶಂಕರ ಪಾಟೀಲ್ ಮುನೇನಕೊಪ್ಪ, ಎಂ.ಚಂದ್ರಪ್ಪ, ತಿಪ್ಪಾರೆಡ್ಡಿ, ಪೂರ್ಣಿಮಾ ಮತ್ತಿತರರು ಸಿಎಂ ಮನೆಗೆ ತೆರಳಿದರು. ಸಂಪುಟ ಪುನರ್‌ ರಚನೆ ವೇಳೆ ಸೂಕ್ತ ಸ್ಥಾನಮಾನ ನೀಡಲಾಗುವುದು. ಪ್ರತ್ಯೇಕ ಸಭೆ ನಡೆಸಿ ಪಕ್ಷ ಮತ್ತು ಸರಕಾರದ ವರ್ಚಸ್ಸಿಗೆ ಧಕ್ಕೆ ತರಬಾರದು. ರಾಜ್ಯದಲ್ಲಿ ಪ್ರವಾಸ ಕೈಗೊಂಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೂ ಇಂತಹ ಚಟುವಟಿಕೆಗೆ ಕಡಿವಾಣ ಹಾಕುವಂತೆ ನಿರ್ದೇಶನ ನೀಡಿದ್ದಾರೆ. ಹಾಗಾಗಿ ಗುಂಪು ಸಭೆಯ ಅವಶ್ಯಕತೆಯಿಲ್ಲ, ಕ್ಷೇತ್ರಾಭಿವೃದ್ಧಿ ಅನುದಾನ ಸೇರಿದಂತೆ ಯಾವುದೇ ವಿಚಾರವಿದ್ದರೂ ನೇರವಾಗಿ ಬಂದು ಮಾತನಾಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ಕೊಟ್ಟರು ಎಂದು ತಿಳಿದು ಬಂದಿದೆ.



ಸಭೆ ನಡೆಸಿ ವಿಧಾನಸೌಧದಿಂದ ಹೊರಬರುತ್ತಿರುವ ಶಾಸಕರು.

ಸಂಪುಟದಲ್ಲಿರುವ ಕೆಲವು ಹಿರಿಯ ಸಚಿವರಿಗೆ ಪಕ್ಷದ ಸಂಘಟನೆ ಜವಾಬ್ದಾರಿ ವಹಿಸಿ ತಮಗೆ ಮಂತ್ರಿ ಸ್ಥಾನ ನೀಡಬೇಕು. ಇಲ್ಲದಿದ್ದರೆ ಪಕ್ಷದ ಮೂಲನಿವಾಸಿಗಳ ಪೈಕಿ ಹುಟ್ಟಿದವರಿಗೆ ಮಂತ್ರಿಯಾಗುವ ಅವಕಾಶ ಲಭಿಸುವುದಿಲ್ಲ ಎಂದು ಸಿಎಂ ಭೇಟಿ ವೇಳೆ ಶಾಸಕರು ಅಹವಾಲು ತೋಡಿಕೊಂಡರೆಂದು ಹೇಳಲಾಗಿದೆ.

ಸರಕಾರದ ಮುಖ್ಯ ಸಚೇತಕ ವಿ.ಸುನೀಲ್ ಕುಮಾರ್ ಅವರೊಂದಿಗೂ ಸಿಎಂ ಮಾತುಕತೆ ನಡೆಸಿದ್ದಾರೆ. ಸೋಮವಾರ ಬೆಳಗ್ಗೆ ಕಲಾಪ ಆರಂಭಕ್ಕೆ ಮುನ್ನವೇ ಸುನೀಲ್ ಅವರನ್ನು ಕರೆಸಿಕೊಂಡು ಯಾವುದೇ ರೀತಿಯ ಪ್ರತ್ಯೇಕ ಸಭೆ ನಡೆಸಲು ಅವಕಾಶ ನೀಡಬಾರದು. ಏನೇ ಅಭಿಪ್ರಾಯವಿದ್ದರೂ ಪಕ್ಷದ ವೇದಿಕೆಯಲ್ಲಿ ಹಂಚಿಕೊಳ್ಳಬೇಕು ಎಂದು ಸೂಚಿಸಿದರು ಎನ್ನಲಾಗಿದೆ.